# ಅಭ್ಯರ್ಥಿಗಳಿಗೆ ಸೂಚನೆಗಳು

(ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುಂಚಿತವಾಗಿ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು)

- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಮುಂಚಿತವಾಗಿ ಅಧಿಸೂಚನೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ, ನೇಮಕಾತಿ ಸ್ಥಳ, ವಿದ್ಯಾರ್ಹತೆ, ಕ್ಷೇತ್ರದಲ್ಲಿ ಹೊಂದಿರುವ ವರ್ಷಗಳ ಅನುಭವ, ಹುದ್ದೆಯ ಸೇವಾವಧಿ, ವೇತನ-ಭತ್ಯೆಗಳು ಹಾಗೂ ನೇಮಕಾತಿ ವಿಧಾನ ಈ ಅಂಶಗಳ ಬಗ್ಗೆ ಗಮನಿಸತಕ್ಕದ್ದು.

- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಮುಂಚಿತವಾಗಿ "ಆಧಾರ್" ನಲ್ಲಿರುವ ಮಾಹಿತಿಯು ಅಂದರೆ ಹೆಸರು, ಜನ್ಮ ದಿನಾಂಕ ಹಾಗೂ ಮೊಬೈಲ್ ಸಂಖ್ಯೆ ಸರಿಯಾಗಿದೆಯೆಂದು ಖಚಿತಪಡಿಸಿಕೊಳ್ಳತಕ್ಕದ್ದು.

- ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡಲು ಪ್ರಾರಂಭಿಸುವ ಮುಂಚಿತವಾಗಿ ಅಪ್‌ಲೋಡ್ ಮಾಡುವ ಸಲುವಾಗಿ ಅಗತ್ಯವಿರುವ ದಾಖಲೆಗಳ ಸ್ವಯಂದೃಢೀಕರಣದೊಂದಿಗೆ ಸಿದ್ಧಪಡಿಸಿಟ್ಟುಕೊಳ್ಳತಕ್ಕದ್ದು. ಎಸ್‌ಎಸ್‌ಎಲ್‌ಸಿ/ತತ್ಸಮಾನ ಅಂಕಪಟ್ಟಿ (ಎ-4 ಅಳತೆ, ಜೆಪಿಜಿ/ಪಿಡಿಎಫ್ ನಮೂನೆಯಲ್ಲಿ, ಗರಿಷ್ಠ 500 ಕೆಬಿ), ವಿದ್ಯಾರ್ಹತೆ (ಎ-4 ಅಳತೆ, ಜೆಪಿಜಿ/ಪಿಡಿಎಫ್ ನಮೂನೆಯಲ್ಲಿ, ಗರಿಷ್ಠ 1 ಎಂಬಿ), ಅನುಭವ (ಎ-4 ಅಳತೆ, ಜೆಪಿಜಿ/ಪಿಡಿಎಫ್ ನಮೂನೆಯಲ್ಲಿ, ಗರಿಷ್ಠ 500 ಕೆಬಿ), ಭಾವಚಿತ್ರ (100 ಕೆಬಿ – 3.5 x 5 ಸೆಂ.ಮೀ., ಜೆಪಿಜಿ/ಪಿಡಿಎಫ್ ನಮೂನೆಯಲ್ಲಿ), ಸಹಿ (100 ಕೆಬಿ – 2.5 x 1.5 ಸೆಂ.ಮೀ., ಜೆಪಿಜಿ/ಪಿಡಿಎಫ್ ನಮೂನೆಯಲ್ಲಿ).

- ನೋಂದಣಿ – ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಕಡ್ಡಾಯವಾಗಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಅಭ್ಯರ್ಥಿಗಳು ಸದರಿ ಪೋರ್ಟಲ್‌ನಲ್ಲಿ ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಅನ್ನು ರಚಿಸಿಕೊಳ್ಳತಕ್ಕದ್ದು (ಆಧಾರ್ ಸಂಖ್ಯೆ ಮೂಲಕ). ಒಂದು ವೇಳೆ ಆಧಾರ್ ಸಂಖ್ಯೆಯನ್ನು ಹೊಂದಿಲ್ಲದಿದ್ದಲ್ಲಿ, ಬೆಂಗಳೂರು ಒನ್ ಸೇವಾ ಕೇಂದ್ರ ಅಥವಾ ಕಿಯೋಸ್ಕ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ.

- ಅಭ್ಯರ್ಥಿಗಳು ಅರ್ಜಿಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಭರ್ತಿ ಮಾಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

- ಅಭ್ಯರ್ಥಿಗಳು ಅಧಿಸೂಚನೆಯಲ್ಲಿ ತಿಳಿಸಿರುವ ಕೊನೆಯ ದಿನಾಂಕ ಅಂದರೆ 30.04.2021 ರಾತ್ರಿ 11.59ರವರೆಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

- ಯಾವುದೇ ಕಾರಣದಿಂದ ಅರ್ಜಿಗಳನ್ನು ನೇರವಾಗಿ ಅಥವಾ ಅಂಚೆ ಮೂಲಕ ಸಂಬಂಧಪಟ್ಟ ಇಲಾಖೆಗೆ ಅಥವಾ ರಾಜ್ಯ ಆಯೋಗಕ್ಕೆ ಅಥವಾ ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸಲ್ಪಟ್ಟಲ್ಲಿ, ಅಂತಹ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

- ಅಭ್ಯರ್ಥಿಗಳು ತಮ್ಮ ಅಧಿಕೃತ ಹಾಗೂ ಪ್ರಸ್ತುತ ಉಪಯೋಗಿಸುತ್ತಿರುವ ಮೊಬೈಲ್ ಹಾಗೂ ಇ-ಮೇಲ್ ವಿವರವನ್ನು ನಮೂದಿಸುವುದು. ಮುಂದಿನ ಪತ್ರವ್ಯವಹಾರವನ್ನು ಅಧಿಕೃತ ಮೊಬೈಲ್ / ಇ-ಮೇಲ್ ಮೂಲಕವೇ ಮಾಡಲಾಗುವುದು.

- ಅಭ್ಯರ್ಥಿಗಳು ಯಾವುದೇ ಬೇರೆ ಬೇರೆ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದರೂ, ಒಂದೇ ಅರ್ಜಿಯನ್ನು ಮಾತ್ರ ಅರ್ಜಿಯಲ್ಲಿ ಯಾವ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುವುದೋ ಆಯಾ ಸ್ಥಳಗಳಲ್ಲಿ ಗುರುತು ಮಾಡಿ ಸಲ್ಲಿಸತಕ್ಕದ್ದು.

## ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ವಿಧಾನ

- ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿದ ನಂತರ "ಅಪ್ಲೈ / ಅರ್ಜಿ ಸಲ್ಲಿಸು" ಎಂಬುದನ್ನು ಕ್ಲಿಕ್ ಮಾಡಿ ಅರ್ಜಿಯನ್ನು ಭರ್ತಿ ಮಾಡುವುದು.

- ಅಭ್ಯರ್ಥಿಗಳು ಕಡ್ಡಾಯವಿರುವ ಮಾಹಿತಿಯನ್ನು ತಪ್ಪದೇ ಭರ್ತಿ ಮಾಡತಕ್ಕದ್ದು ಹಾಗೂ ಸ್ಕ್ಯಾನ್ ಮಾಡಲಾಗಿರುವ ಭಾವಚಿತ್ರ, ದಾಖಲೆಗಳು ಹಾಗೂ ಸಹಿಯನ್ನು ಆಯಾ ಸ್ಥಳಗಳಲ್ಲಿ ಅಪ್‌ಲೋಡ್ ಮಾಡತಕ್ಕದ್ದು, ಇಲ್ಲದಿದ್ದಲ್ಲಿ ಮುಂದಿನ ಹಂತದ ಮಾಹಿತಿಯನ್ನು ಭರ್ತಿ ಮಾಡಲು ಸಾಧ್ಯವಾಗುವುದಿಲ್ಲ. ಮುಂದಿನ ಹಂತದಲ್ಲಿ ಅರ್ಜಿ ಶುಲ್ಕವನ್ನು ಪಾವತಿಸಬೇಕು ಅಥವಾ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಈಗಾಗಲೇ ಅರ್ಜಿ ಶುಲ್ಕವನ್ನು ಪಾವತಿ ಮಾಡಿದ್ದಲ್ಲಿ ವಿನಾಯಿತಿಗಾಗಿ ವಿವರವನ್ನು ನಮೂದಿಸಬೇಕು.

## ಅರ್ಜಿ ಶುಲ್ಕ ಪಾವತಿ ವಿಧಾನ

- ಅಭ್ಯರ್ಥಿಗಳು "ಪಾವತಿ ಆಯ್ಕೆ" ಯನ್ನು ಕ್ಲಿಕ್ ಮಾಡಿ, ಅಲ್ಲಿ ಒದಗಿಸಿರುವ ವಿಧಾನದ ಮೂಲಕ ಅಂದರೆ ಡೆಬಿಟ್ ಕಾರ್ಡ್ / ಕ್ರೆಡಿಟ್ ಕಾರ್ಡ್ / ನೆಟ್ ಬ್ಯಾಂಕಿಂಗ್ / ಪೇಟಿಎಂ ಮೂಲಕ ಅರ್ಜಿ ಶುಲ್ಕವನ್ನು ಪಾವತಿ ಮಾಡಬಹುದು.

- ಅಭ್ಯರ್ಥಿಗಳು ಅರ್ಜಿ ಶುಲ್ಕದಿಂದ ವಿನಾಯಿತಿ ಕೋರಿದಲ್ಲಿ, ಈ ಹಿಂದೆ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧಿಸೂಚನೆ ದಿನಾಂಕ 11.05.2020ರ ಅನುಸಾರ ಅರ್ಜಿ ಸಲ್ಲಿಸಿ ಅರ್ಜಿ ಶುಲ್ಕವನ್ನು ಪಾವತಿ ಮಾಡಿದ್ದಲ್ಲಿ, ಡಿಡಿ / ಐಪಿಒ ಸಂಖ್ಯೆ, ದಿನಾಂಕ ಹಾಗೂ ಬ್ಯಾಂಕ್ / ಅಂಚೆ ಕಛೇರಿಯ ವಿವರವನ್ನು ಅರ್ಜಿಯಲ್ಲಿ "ವಿನಾಯಿತಿ" ಕ್ಲಿಕ್ ಮಾಡಿ ವಿವರವನ್ನು ನಮೂದಿಸುವುದು. ಹಿಂದಿನ ಅರ್ಜಿ ಶುಲ್ಕದ ವಿವರವನ್ನು ನಮೂದಿಸದಿದ್ದಲ್ಲಿ ಅರ್ಜಿ ಶುಲ್ಕದಿಂದ ವಿನಾಯಿತಿಯನ್ನು ಪಡೆಯಲು ಅವಕಾಶವಿರುವುದಿಲ್ಲ.

- ಅಭ್ಯರ್ಥಿಗಳು ಎಲ್ಲಾ ವಿವರಗಳನ್ನು ದಾಖಲಿಸಿದ ನಂತರ "ಸಲ್ಲಿಸು (Submit)" ಎಂಬುದನ್ನು ಕ್ಲಿಕ್ ಮಾಡುವುದು. ಈ ರೀತಿ ಸಲ್ಲಿಸಿದ ನಂತರ ಅಭ್ಯರ್ಥಿಗಳ ಅಧಿಕೃತ ಮೊಬೈಲ್ ಹಾಗೂ ಇ-ಮೇಲ್‌ಗೆ ಅಭ್ಯರ್ಥಿಯು ಅರ್ಜಿ ಸಲ್ಲಿಸಿರುವ ಬಗ್ಗೆ ಸ್ವೀಕೃತಿಯಾಗಿ ಮಾಹಿತಿ ರವಾನೆಯಾಗುವುದು.

- ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧ ಯಾವುದೇ ತಾಂತ್ರಿಕ ಸಮಸ್ಯೆ ಉಂಟಾದಲ್ಲಿ ಅಥವಾ ಏನಾದರೂ ಸ್ಪಷ್ಟೀಕರಣದ ಅಗತ್ಯತೆ ಕಂಡುಬಂದಲ್ಲಿ, ದೂರವಾಣಿ / ಮೊಬೈಲ್ ಸಂಖ್ಯೆ 8088304855 / 6361799796 ನ್ನು ಕಛೇರಿ ಸಮಯದಲ್ಲಿ (ಶನಿವಾರ ಹಾಗೂ ಭಾನುವಾರಗಳನ್ನು ಹೊರತುಪಡಿಸಿ) ಅಂದರೆ ಬೆಳಿಗ್ಗೆ 9-00ರಿಂದ ಸಂಜೆ 6-00 ಘಂಟೆಯವರೆಗೆ ಸಂಪರ್ಕಿಸಬಹುದಾಗಿರುತ್ತದೆ.

***

## INSTRUCTIONS TO CANDIDATES

**(Candidates must read the instructions carefully before filling the Application)**

- Before submitting the application through online the Candidate shall go through the Notification carefully with regard to the No. of posts, place of vacancy, qualification, experience in the field, term of office, Salary & allowances, mode/criteria of selection etc.

- Before submitting the Application, candidates must ensure that their Name, Date of Birth & Mobile No. are correct as in Aadhaar.

- The candidates before submitting/filing the online Application, keep the required documents i.e., SSLC / Equivalent Certificate (A4 size in jpg/pdf format below 500 kb size), Qualification (A4 size in jpg/pdf format below 1MB size), experience (A4 size in jpg/pdf format below 500 kb size), photo (3.5 x 5 cms in jpg/pdf format below 100 kb size), signature (2.5 x 1.5 cm in jpg/pdf format below 100 kb size) duly self attested for uploading the same.

- **Registration** - The Candidates must register with Seva-sindu portal before applying to the post by creating user ID & Password (**Aadhaar based**). In case candidate does not have Aadhar, he/she may register his/her name through Bengaluru One Centers / KIOSK.

- Candidate is allowed to fill the Application either in Kannada or in English.

- The candidate is allowed to apply through online only till the last date as notified. Thereafter, it will be disabled.

- For any reasons applications submitted through post or by hand directly to the concerned Department / State Consumer Commission / Selection Committee, such applications shall not be considered.

- Candidate shall mention his/her valid e-mail ID and Mobile in the Application. Further communication, if any, will be sent only through registered e-mail / Mobile.

- Candidate shall submit only one application irrespective of any posts and select against the respective posts for which they are applying.

**HOW TO APPLY TO THE POST ONLINE**

- Once the candidate click on the link "Apply", Application form will be displayed on the screen to proceed further.

- The candidate must fill all the mandatory and other information including uploading of photo, scanned documents and signature and "click" on submit to proceed to payment option. Else submitting information in the next field will not be possible. At next stage, candidates shall make the payment or to furnish the fee exemption details.

**PAYMENT MODE**

- Once the candidates select the payment option, they can make the payment of Application Fee through online i.e., net banking, Debit Card / Credit Card / Paytm.

- If candidates seeking exemption from Application Fee, they shall keep ready the details of payment made pursuant to Notification dated 11.05.2020 issued by the State Consumer Commission, i.e., DD/IPO No., Date and Bank/Post Office and provide the details in the form. If the fee details are not furnished, candidate cannot claim fee exemption.

- Click on "Submit". Once submitting the Application is completed, the candidate will receive acknowledgment for having submitted the Application.

- In case Applicant needs any clarification or finds any difficulty due to technical issue in submitting the Application, he/she may contact No.8088304855/ 6361799796 during office hours i.e., between 09.00 AM to 6.00 PM. Monday to Friday.

***